



## ಎಳನೀರು ಆಂಜನೇಯ !

ದಕ್ಷಿಣ ಕನ್ನಡ ಜಿಲ್ಲೆಯ ಮೂಡಬಿದರೆಯ ಮುಖ್ಯರಸ್ತೆಯ ಪಕ್ಕದಲ್ಲೇ ಇರುವ ಆಂಜನೇಯ ಎಳನೀರು ಪ್ರಿಯ. ಭಕ್ತರು ಇಲ್ಲಿನ ಆಂಜನೇಯನಿಗೆ ಎಳನೀರು ಅರ್ಪಿಸುತ್ತಾರೆ. ಇಷ್ಟಾರ್ಥ ಸಿದ್ಧಿಗಾಗಿ ತಮ್ಮ ಶಕ್ತಿಗೆ ಅನುಸಾರವಾಗಿ ಒಂದರಿಂದ ಸಾವಿರ ಎಳನೀರಿನವರೆಗೂ ಅರ್ಪಿಸುವುದಾಗಿ ಹರಕೆ ಹೊರುತ್ತಾರೆ. ಬೇಡಿಕೆ ಈಡೇರಿದಾಗ ತಾವು ಹರಕೆ ಮಾಡಿಕೊಂಡಷ್ಟು ಎಳನೀರು ಅರ್ಪಿಸುತ್ತಾರೆ.

ದೇವಾಲಯದಲ್ಲೇ ಎಳನೀರು ಮಾರಾಟ ಮಾಡಲಾಗುತ್ತದೆ. ದೇವಾಲಯದ ಒಳಗೆ ಎಳನೀರು ಕತ್ತರಿಸಿ ಒಪ್ಪವಾಗಿ ಜೋಡಿಸುತ್ತಾರೆ. ನಂತರ ಎಳನೀರನ್ನು ದೇವರಿಗೆ ಅಭಿಷೇಕ ಮಾಡಿ, ದೇವಾಲಯದ ಹೊರಗೆ ಇಟ್ಟಿರುವ ಸ್ಟೀಲ್ ಟ್ಯಾಂಕ್‌ಗೆ ಹರಿಸುತ್ತಾರೆ. ಟ್ಯಾಂಕ್‌ಗೆ ನಲ್ಲಿಗಳನ್ನು ಅಳವಡಿಸಿದ್ದು, ಭಕ್ತರು ಲೋಟಗಳಲ್ಲಿ ಎಳನೀರು ಹಿಡಿದು ಕುಡಿಯಬಹುದು. ಬಾಟಲ್‌ಗಳಲ್ಲಿ ಹಿಡಿದು ಮನೆಗೂ ಕೊಂಡೊಯ್ಯುತ್ತಾರೆ. ದಿನಕ್ಕೆ ಏನಿಲ್ಲವೆಂದರೂ ಸುಮಾರು 5 ಸಾವಿರ ಎಳನೀರು ಅರ್ಪಿಸಲಾಗುತ್ತದೆ. ಅಷ್ಟೂ ಎಳನೀರನ್ನು ಟ್ಯಾಂಕ್‌ಗೆ ಹರಿಸಲಾಗುತ್ತದೆ. ಸಾವಿರ ಕಂಬಗಳ ಬಸದಿಯ ಅನತಿ ದೂರದಲ್ಲೇ ಈ ದೇವಾಲಯ ಇದೆ.

**– ನಳಿನಾ ಕಾಂತರಾಜ್, ಹೊಳಲ್ಕೆರೆ**



## ಬಸವನ ಹೂ

ಈ ಹೂವಿನೊಳಗಿರುವ 'ಕುಸುಮ' ದ ಆಕಾರವು, ಎತ್ತಿನ (ಬಸವಣ್ಣನ) ಮುಖ, ಹಣೆ, ಕಣ್ಣು, ಮೂಗು, ಮೂಗಿನ ಹೊಳ್ಳೆ ಮುಂತಾದವುಗಳನ್ನು ಹೊಂದಿದ್ದು ನೋಡಲು ಥೇಟ್ ಬಸವನ ಹಾಗೆ ಕಾಣುತ್ತದೆ. ಅಷ್ಟೇ ಅಲ್ಲ, 'ಕುಸುಮ' ದ ಹಿಂದಿರುವ ಎಳೆಯನ್ನು ಸೂಕ್ಷ್ಮವಾಗಿ ಎಳೆದರೆ ಎತ್ತಿನ ಹಾಗೆ ಗೋಣು ಹಾಕುತ್ತದೆ. ಎಪ್ರಿಲ್ ನಲ್ಲಿ ಬೀಳುವ ಮುಂಗಾರು ಪೂರ್ವ ಮಳೆಗೆ, ಮಲೆನಾಡಿನ ಬಹುತೇಕ ಹೊಲ ಗದ್ದೆಗಳ ಬದುವಿನ ಮೇಲೆ, ಅರಿಷಿಣ ಜಾತಿಗೆ ಸೇರಿದ ಈ ಸಸ್ಯ ಜನ್ಮ ತಾಳುತ್ತದೆ. ಮೇ– ಜೂನ್‌ನಲ್ಲಿ ಹೂ ಬಿಡುವ ಇದು, ಒಮ್ಮೆ ಹತ್ತಾರು ಹೂವುಗಳನ್ನು ಬಿಡುತ್ತದೆ. ಇಡೀ ದಿನ ಬಾಡದೆ ಇರುವ ಈ ಬಸವನ ಹೂವನ್ನು, ಕೆಲವು ಕಡೆ 'ಕಾರಹುಣ್ಣಿವಿ' ಹಬ್ಬದ ಪೂಜೆಗೆ ಕಡ್ಡಾಯ ತರುವ ನಿಯಮವಿದೆ.

**ಚಿತ್ರ– ಬರಹ:**
**ಹೆಚ್.ಜಿ.ಅರುಣ್‌ಕುಮಾರ್ ಹುರುಳಿ, ಶಿವಮೊಗ್ಗ**

## ಚೆನ್ನಮ್ಮನ ಆಶ್ರಯ

ಮರಾಠಾ ರಾಜ ಛತ್ರಪತಿ ಶಿವಾಜಿಯ ಮಗ ರಾಜಾರಾಮನು ಮೊಗಲರ ವಿರುದ್ಧ ಸೆಣಸಿ ಎದುರಿಸಲಾಗದೇ ಕೆಳದಿಗೆ ಬರುತ್ತಾನೆ. ಅಲ್ಲಿ ರಾಣಿ ಚೆನ್ನಮ್ಮ ಆತನಿಗೆ ಆಶ್ರಯ ನೀಡುತ್ತಾಳೆ. ದೇಶದ ಚರಿತ್ರೆಯ ಬಹುಸ್ಮರಣೀಯ ಘಟನೆಯಾಗಿರುವ ಈ ಚಾರಿತ್ರಿಕ ಸನ್ನಿವೇಶವನ್ನು ಕೆಳದಿಯ ವೀರಭದ್ರ ದೇವಾಲಯದ ಎದುರಿನ ಕಂಬದಲ್ಲಿ ಬಹುಸುಂದರವಾಗಿ ಚಿತ್ರಿಸಲಾಗಿದೆ. ಶಿಲ್ಪದ ಮುಖದ ಭಾವನೆ, ಶೈಲಿ ಚರಿತ್ರೆಯನ್ನು ಸಾರುತ್ತಿವೆ.

**–ಚಂದ್ರಕಲಾ, ಗಂಗೊಳ್ಳಿ**

